ಓ ಎಸ್ ನಂಃ 799/2014

ಡಿ. ಡಬ್ಲ್ಯೂ ಃ 2

**ದಿಃ 03.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರದೆ ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಜಿ ಯು ವಕೀಲರಿಂದ ಃ**

ನಮ್ಮ ತಂದೆ ತೀರಿಕೊಂಡಾಗ ಅವರಿಗೆ 80 ವರ್ಷ ವಯಸ್ಸಾಗಿತ್ತು. ರೇವಣ್ಣ ಇವರಿಗೂ ಸಹ ತೀರಿಕೊಂಡಾಗ 82 ವರ್ಷ ವಯಸ್ಸಾಗಿತ್ತು. ನಮ್ಮ ತಂದೆ 1980 ರಲ್ಲಿ ತೀರಿಕೊಂಡಿದ್ದಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಮ್ಮ ತಾತನಿಗೆ ಸೇರಿದ ಸ್ವತ್ತುಗಳ ಬಗ್ಗೆ ಮಾಹಿತಿ ಕೊಟಿದ್ದೇವೆ. ಅದರಲ್ಲಿ ಯಾವ ಸ.ನಂ. ಬರೆದಿದ್ದಾರೆ ಎಂದು ಮರೆತಿದ್ದೇನೆ. ನಮ್ಮ ತಾತನಿಗೆ ಸೇರಿದ 5 ಐಟಂ ಸ್ವತ್ತುಗಳಿವೆ ಎಂದು ಅದರಲ್ಲಿ ಬರೆಯಿಸಿದ್ದೇನೆ. ನಮ್ಮ ತಾತನಿಗೆ ಸೇರಿದ ಯಾವುದೆ ಸ್ವತ್ತುಗಳಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಅವುಗಳನ್ನು ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ರೇವಣ್ಣ ಇವರಿಗೆ ಪಿತ್ರಾರ್ಜಿತವಾಗಿ ಬಂದ ಯಾವ ಸ್ವತ್ತುಗಳಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸ್ವತ್ತುಗಳಿದ್ದವು ಎಂದು ಸಾಕ್ಷಿ ಹೇಳುತ್ತಾರೆ. ಅವರಿಗೆ ಯಾವುದೆ ಪಿತ್ರಾರ್ಜಿತ ಸ್ವತ್ತುಗಳಿಲ್ಲದ ಕಾರಣ ಅದರ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ದಿನಾಂಕ ಃ 10.04.1947 ರಲ್ಲಿ ಕ್ರಯಪತ್ರವು ರೇವಣ್ಣ ಇವರು ಒಬ್ಬರೇ ಸ್ವಯಾರ್ಜಿತವಾಗಿ ಕ್ರಯಕ್ಕೆ ತೆಗೆದುಕೊಂಡ ಸ್ವತ್ತು ಎಂದರೆ ಸರಿಯಲ್ಲ. ರೇವಣ್ಣ ಮತ್ತು ಮಂಡಯ್ಯ ಇಬ್ಬರು ಸೇರಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. 1947 ಕ್ಕಿಂತ ಮುಂಚೆ ಮಂಡಯ್ಯ ಮತ್ತು ರೇವಣ್ಣ ಇವರಿಗೆ ಒಟ್ಟು ಕುಟುಂಬದಲ್ಲಿ ಯಾವುದೆ ಸ್ವತ್ತುಗಳಿರಲಿಲ್ಲ ಎಂದರೆ ಸರಿಯಲ್ಲ. 1947 ಕ್ಕಿಂತ ಮುಂಚೆ ಯಾವುದೆ ಒಟ್ಟು ಕುಟುಂಬದ ಸ್ವತ್ತು ಇಲ್ಲದ ಕಾರಣ ಅವರ ಮದ್ಯೆ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಸ.ನಂ. 46 ಮತ್ತು 47 ಇವುಗಳು ರೇವಣ್ಣ ಇವರ ಸ್ವಯಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಕ್ರಯಪತ್ರಗಳು ಸ.ನಂ. 47 ರ ಕ್ರಯಪತ್ರಗಳು ಎಂದರೆ ಸರಿಯಲ್ಲ. ಸ.ನಂ. 46 ರ ಕ್ರಯಪತ್ರಗಳನ್ನು ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ.

ನಿ ಡಿ 7 ರಲ್ಲಿ ಸ.ನಂ. 47 ಎಂದು ಬರೆದಿದೆ ಎಂದರೆ ಸರಿ. ಅದು ತಪ್ಪಾಗಿ ನಮೂದಾಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂಬರ್ ತಪ್ಪಾಗಿದ್ದನ್ನು ಸರಿ ಪಡಿಸಿಕೊಳ್ಳಲು ಯಾವುದೆ ಕ್ರಮ ತೆಗೆದುಕೊಂಡಿಲ್ಲ. ನಿ ಡಿ 7 ರಲ್ಲಿ ಸ.ನಂ. 47 ಇದು ಪೌತಿ ಖಾತೆ ಮೂಖಾಂತರ ಲಕ್ಷ್ಮೀನರಸಿಂಹಯ್ಯ

ಇವರಿಗೆ ಖಾತೆ ಆಗಿದೆ ಎಂದು ಬರೆದಿದೆ ಎಂದರೆ ಸರಿಯಲ್ಲ. ನಿ ಡಿ 6 ನ್ನು ಬರೆಯಿಸುವ ಸಂದರ್ಭದಲ್ಲಿ ಲಕ್ಷ್ಮೀನರಸಿಂಹಯ್ಯ ಇವರಿಗೆ ಸ.ನಂ. 46 ರಲ್ಲಿ ಖಾತೆ ಇದೆ ಎಂದು ತಿಳಿದುಕೊಂಡು ಬರೆಯಿಸಿದ್ದೇವೆ. ದಿನಾಂಕ : 10.04.1947 ರಂದು ರೇವಣ್ಣ ಇವರ ಹೆಸರಿನಲ್ಲಿ ಆದ ಕ್ರಯಪತ್ರವನ್ನು ನಾನು ನೋಡಿಲ್ಲ. ಲಕ್ಷ್ಮೀನರಸಿಂಹಯ್ಯ ಇವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಕ್ರಯಪತ್ರವನ್ನು ನಾನು ನೋಡಿದ್ದು ನೆನಪಿಲ್ಲ. 1947 ರ ಕ್ರಯಪತ್ರದಲ್ಲಿ ಲಕ್ಷ್ಮೀನರಸಿಂಹಯ್ಯ ಇವರ ತಂದೆ ಯಿಂದ ರೇವಣ್ಣ ಇವರಿಗೆ ಸ.ನಂ 46 ರಲ್ಲಿ 6 ಎಕರೆ 36 ಗುಂಟೆ ಜಮೀನು ಸ.ನಂ. 47 ರಲ್ಲಿ 2 ಎಕರೆ 13 ಗುಂಟೆ ಜಮೀನು ಕ್ರಯವಾಗಿದೆ ಎಂದು ಬರೆದಿದೆ ಎಂದರೆ ಸರಿ. ಕ್ರಯವಾದ ದಿನದಿಂದ ರೇವಣ್ಣ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ, ರೇವಣ್ಣ ಮತ್ತು ಮಂಡಯ್ಯ ಸ್ವಾಧೀನದಲ್ಲಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಮಂಡಯ್ಯ ಸ್ವಾಧೀನದಲ್ಲಿ ಇಲ್ಲದೆ ಇದ್ದರೂ ಆಸ್ತಿ ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕ್ರಯಪತ್ರದಲ್ಲಿ ಸ.ನಂ. 46 ಕ್ಕೆ ಏನು ಚೆಕ್ ಬಂದಿ ತೋರಿಸಿದ್ದಾರೆ ಎಂದು ಗೊತ್ತು. ಅದರಲ್ಲಿ ಪೂರ್ವಕ್ಕೆ ಕೆಂಪಯ್ಯ ಇವರ ಜಮೀನು, ಪಶ್ಚಿಮಕ್ಕೆ ನಂಜೇಗೌಡರ ಜಮೀನು , ಉತ್ತರಕ್ಕೆ ಗೂಳಿ ಬೈರಣ್ಣ ಇವರ ಜಮೀನು ಮತ್ತು ದಕ್ಷಿಣಕ್ಕೆ ರಾಮಚಂದ್ರಯ್ಯ ಇವರ ಜಮೀನಿದೆ. ಆ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಪಟೇಲ್ ಕೇಂಪರಾಮಯ್ಯ ಮತ್ತು ಪಟೇಲ್ ತಿಮ್ಮೇಗೌಡ ಇವರ ಜಮೀನು ಎಂದು ಬರೆದಿದೆ ಎಂದರೆ ಸರಿ. ಈ ಚೆಕ್ ಬಂದಿ ಮದ್ಯದ ಜಮೀನಿನಲ್ಲಿ ರೇವಣ್ಣ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿದ್ದೇವು ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 47 ರ ಪೂರ್ವಕ್ಕೆ ಕೆಂಪಯ್ಯ ರವರ ಜಮೀನು, ಪಶ್ಚಿಮಕ್ಕೆ ನಂಜೇಗೌಡರ ಜಮೀನು, ಉತ್ತರಕ್ಕೆ ಗೂಳಿ ಬೈರಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ರಾಮಕೃಷ್ಣಯ್ಯ ಇವರ ಜಮೀನಿದೆ.

ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿದ್ದರೂ ಸಹ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 47 ರ ಪೂರ್ವಕ್ಕೆ ಗೋಮಾಳ, ಪಶ್ಚಿಮಕ್ಕೆ ಗೂಳಯ್ಯ, ಕೆಂಪರಾಮಯ್ಯ ಮತ್ತು ಇತರರ ಜಮೀನು, ಉತ್ತರಕ್ಕೆ ಗೋಮಾಳ ಮತ್ತು ದಕ್ಷಿಣಕ್ಕೆ ಸ.ನಂ. 46/2 ರ ಜಮೀನಿದೆ ಎಂದರೆ ಸರಿಯಲ್ಲ. ಸ.ನಂ. 46 ಮತ್ತು 47 ಇವುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಕೊಂಡು ಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮಂಡಯ್ಯ ಇವರ ಆದಾಯದಿಂದ ಬಂದ ಹಣದಿಂದ ಸ.ನಂ. 46 ಮತ್ತು 47 ಇವುಗಳನ್ನು ವಾದಿಯ ತಂದೆ ರೇವಣ್ಣ ಇವರ ಹೆಸರಿನಲ್ಲಿ

ಕ್ರಯಕ್ಕೆ ತೆಗೆದುಕೂಂಡಿದ್ದಾರೆ ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ.

ನಂತರ ದಿನಾಂಕ ಃ 30.05.1962 ರಂದು ಮಂಡಯ್ಯ ಮತ್ತು ರೇವಣ್ಣ ದಾವಾ ಸ್ವತ್ತುಗಳನ್ನು ಮತ್ತು ಇತರೆ ಸ್ವತ್ತುಗಳನ್ನು ಪಂಚಾಯಿತಿ ಪಾಲು ಪಟ್ಟಿಯ ಮುಖಾಂತರ ಭಾಗ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ದಾವಾ ಸ್ವತ್ತುಗಳಲ್ಲಿ ಯಾವುದೆ ರೀತಿಯ ಭಾಗ ಅಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ 3 ಎಕರೆ 36 ಗುಂಟೆ ನಮ್ಮ ತಂದೆಯ ಭಾಗಕ್ಕೆ ಹಾಗೂ ಪಶ್ಚಿಮದ 3 ಎಕರೆ ಸ್ವತ್ತು ರೇವಣ್ಣ ಇವರಿಗೆ ಬಂದಿತ್ತು ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಸ.ನಂ.47 ರಲ್ಲಿ ಪಶ್ಚಿಮದ 3 ಎಕರೆ ರೇವಣ್ಣನಿಗೆ ಹಾಗೂ ಪೂರ್ವದ 3 ಎಕರೆ ನಮ್ಮ ತಂದೆಗೆ ಭಾಗ ಆಗಿದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಆ ರೀತಿ ಬರೆಯಿಸಿರುವುದು ತಪ್ಪು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 47 ಎಂದು ನಮೂದಾಗಿ ವಿಸ್ತೀರ್ಣ ಮತ್ತು ಚೆಕ್ ಬಂದಿಯು ಅಜ್ಜನಹಳ್ಳಿ ಗ್ರಾಮದ ಸ.ನಂ 46/2 ರಲ್ಲಿ 3 ಎಕರೆ ಎಂದು ಸರಿಯಾಗಿ ವಾದಿಯ ಹೆಸರಿಗೆ ಆಗಿದೆ ಎಂದು ಬರೆಯಿಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 1947 ರಲ್ಲಿ ಕ್ರಯವಾದ ನಂತರ ಕಂದಾಯ ದಾಖಲೆಗಳನ್ನು ರೇವಣ್ಣ ನ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸರಿ. ಇವತ್ತಿಗೂ ಸಹ ಅವರ ಹೆಸರಿನಲ್ಲಿ ಖಾತೆ ಆಗಿಲ್ಲ ಎಂದರೆ ಸರಿ. ಕೈ ಬಿಟ್ಟು ಹೋಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 47 ರಲ್ಲಿ ಮಾತ್ರ ರೇವಣ್ಣ ನ ಹೆಸರಿನಲ್ಲಿ ಖಾತೆ ಬರುತ್ತಿತ್ತು ಎಂದರೆ ಗೊತ್ತಿಲ್ಲ.

ನಾನಾಗಲಿ ಅಥವಾ ಪ್ರತಿವಾದಿ 12 ರಿಂದ 17 ರವರಿಗಾಗಲಿ ಸ.ನಂ. 46 ಮತ್ತು 47 ರಲ್ಲಿ ಯಾವುದೆ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ದಿನಾಂಕ ಃ 23.02.1998 ಹಾಗೂ 15.10.2001 ರಂದು 13 ನೇ ಪ್ರತಿವಾದಿ ಕ್ರಯಪತ್ರ ಮಾಡಿಸಿಕೊಂಡಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಆ ಕ್ರಯಪತ್ರವು ಸ.ನಂ. 47 ಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸ.ನಂ. 47 ರಲ್ಲಿ 3 ಎಕರೆ ಜಮೀನ್ನು ಮಾರಾಟ ಮಾಡಲು ಲಕ್ಷ್ಮೀನರಸಿಂಹಯ್ಯ ಇವರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ಸ.ನಂ. ನಲ್ಲಿ ಅವರಿಗೆ 2 ಎಕರೆ 13 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಎರಡೂ ಕ್ರಯಪತ್ರಗಳನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತುಗಳಲ್ಲಿ ಯಾವುದೆ ಜಮೀನನ್ನು ಉಳಿಸಿಕೂಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1947 ರಲ್ಲಿ ಆದ ಕ್ರಯಪತ್ರದ ಪ್ರಕಾರ ಸ.ನಂ. 46 ಮತ್ತು 47 ರ ಮಾಲೀಕರು ಮತ್ತು

ಸ್ವಾಧೀನದಾರರು ರೇವಣ್ಣ ಆಗಿದ್ದರು ಎಂದರೆ ಸರಿಯಲ್ಲ. ಅವರು ತೀರಿಕೊಂಡ ನಂತರ ವಾದಿಯು ಮಾಲೀಕ ಮತ್ತು ಸ್ವಾಧೀನದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ. 46 ರಲ್ಲಿ ರೇವಣ್ಣ, ಲಕ್ಷ್ಮೀನರಸಿಂಹಯ್ಯ ಮತ್ತು ಲಕ್ಷ್ಮೀನರಸಿಂಹಯ್ಯ ಇವರ ಮಕ್ಕಳು ಯಾವುದೆ ಸ್ವತ್ತನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ. 46 ಮತ್ತು 47 ಇದು ಮೊದಲು ರಾಮಕ್ಕ ಇವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಅದರಲ್ಲಿ ಪೂರ್ವಭಾಗದ ಅರ್ಧ ಭಾಗವನ್ನು ರಾಮಕ್ಕ ಇವರು ಕೆಂಪಯ್ಯ ಇವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಪಶ್ಚಿಮಕ್ಕೆ ರೇವಣ್ಣ ಇವರಿಗೆ ಕ್ರಯವಾಗಿದೆ ಎಂದರೆ ಸರಿ. ದಾವಾ ಸ್ವತ್ತು ನಮಗೆ ಸೇರಿದ್ದು, ಖಾತೆ ಮಾಡಿಕೊಡಬೇಕೆಂದು ಅರ್ಜಿ ಕೊಟ್ಟು ಪ್ರತಿವಾದಿಯಾಗಿ ಬಂದಿದ್ದೇನೆ. ಲಕ್ಷ್ಮೀನರಸಿಂಹಯ್ಯ ಇವರು ಹಾಕಿದ ದಾವೆಯನ್ನು ವಜಾ ಮಾಡಬೇಕೆಂದು ಮಾತ್ರ ಕೇಳಿದ್ದೇವೆ ಎಂದರೆ ಸರಿ. ಕೇಸ್ ವಜಾ ಆದರೆ ಸ.ನಂ. 46 ಮತ್ತು 47 ನಮಗೆ ಸಿಗುತ್ತವೆ ಎಂಬ ಕಾರಣಕ್ಕೆ ಅರ್ಜಿ ಹಾಕಿ ಪ್ರತಿವಾದಿಯಾಗಿ ಬಂದಿದ್ದೇವೆ ಎಂದರೆ ಸರಿಯಲ್ಲ. ಸ.ನಂ. 46 ರಲ್ಲಿ 3 ಎಕರೆ 36 ಗುಂಟೆ ನಮಗೆ ಬರಬೇಕೆಂದು ಸಲ್ಲಿಸಿದ್ದೇನೆ. ನಾನು ಒಂದು ಸುಳ್ಳು ಪ್ರತಿವಾದಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಲಕ್ಷ್ಮೀನರಸಿಂಹಯ್ಯ ಇವರ ಸ್ವಯಾರ್ಜಿತ ಸ್ವತ್ತು ಆಗಿದ್ದರಿಂದ ಸಿದ್ದರಾಮಯ್ಯ 3 ಎಕರೆ ಕ್ರಯಕ್ಕೆ ತೆಗೆದುಕೊಂಡಿದ್ದಾರೆ.

**ಉಳಿದ ಪ್ರತಿವಾದಿಗಳ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**